# ‘ಯಾವುದೀ ಹೊಸ ಸಂಚು...’

ಈ ಬೀದಿಯಲ್ಲಿ ಎದುರು ಮನೆಯ ಮೊದಲನೇ ಅಂತಸ್ತಿಗೆ ಮೂವರು ಹುಡುಗರು ಬಾಡಿಗೆ ಬಂದಿದ್ದಾರೆ, ಅವರಲ್ಲೊಬ್ಬ ಈ ಮನೆಯ ಕನಸು ಕಂಗಳ ಹುಡುಗಿಯ ಕನಸುಗಳಿಗೆ ಬಣ್ಣ ಹಚ್ಚಿದ್ದಾನೆ! ಓದು ಮುಗಿಸಿ ಕೆಲಸ ಮಾಡುತಿರುವ ಈ ಸುಕೋಮಲೆ ಅಮ್ಮ ಅಪ್ಪನ ಪ್ರೀತಿಯ ಒಬ್ಬಳೇ ಮಗಳು, ಅಣ್ಣ ಮೊದಲೇ ಎಂಜಿನಿಯರಿಂಗ್ ಮುಗಿಸಿ ವಿದೇಶಕ್ಕೆ ಹಾರಿದ್ದಾನೆ, ಅಪ್ಪ ಈ ವರ್ಷ ತಾನೇ ರಿಟೈರಾಗಿದ್ದಾರೆ, ಅಮ್ಮ ಅಪ್ಪ ಇಬ್ಬರೂ ಮಗಳ ಮದುವೆಯ ಯೋಚನೆ ಮಾಡುತಿದ್ದಾರೆ. ಅಂತವಳಿಗೆ ಇವನ ಕೈಯಲ್ಲಿನ ಗಿಟಾರು, ಬಿಗಿದುಕೊಂಡ ತುಟಿಗಳು, ಒರಟೆನಿಸದ ಗಡ್ಡ, ಸಣ್ಣಗಿನ ತಲೆಗೂದಲು, ನೇರಾನೇರ ಮೂಗು ಎಲ್ಲವೂ ಮೊದಲನೇ ನೋಟಕ್ಕೇ ಇಷ್ಟವಾಯಿತು!

**‘ಯಾವುದೀ ಹೊಸ ಸಂಚು ಎದೆಯಂಚಿನಲಿ ಮಿಂಚಿ, ಮನಸು ಕನಸುಗಳನ್ನು ಕಲೆಸಿರುವುದು’**

‘ಸಕ್ಕತ್‌ಏರಿಯಾ ಸೆಲೆಕ್ಟ್ ಮಾಡಿದೀಯಾಮ್ಮ, ಒಮ್ಮೆಲೇ ಮರಳುಗಾಡಿನಿಂದ ಎವರ್‌ಗ್ರೀನ್ ಫಾರೆಸ್ಟ್‌ಗೆ ಬಂದಂತಾಯ್ತು’ ಬೀದಿಯ ತುಂಬೆಲ್ಲ ಇದ್ದ ಹುಡುಗಿಯರ ಕಂಡು ಅವನ ರೂಮ್‌ಮೇಟ್‌ಗಳು ಉದ್ಗರಿಸುತಿದ್ದರೆ, ಅವನ ದೃಷ್ಟಿಗೆ ಅವಳು ಸಿಕ್ಕಿಯೇ ಬಿಟ್ಟಳಲ್ಲ! ಅವನ ಸ್ನೇಹಿತರೆಲ್ಲ ಗಪ್ಪಾದರು, ಅಂತಹ ಜಡಭರತನಿಗೆ ತಾಕಿದ ಹೂಬಾಣದ ಪರಿಯ ಕಂಡು ಬೆಚ್ಚಿಬಿದ್ದರು. ಸುಕೋಮಲೆ, ನೀಳವಾದ ತಲೆಗೂದಲು, ಬೀದಿಯಲ್ಲಿ ನಡೆಯುವಾಗಲೂ ಯಾರನ್ನೂ ಮುಖವೆತ್ತಿನೋಡದೇ ಮುಂಗುರುಳ ಮರೆಯಲ್ಲೇ ನೋಡುತ್ತ ಬಳುಕುತ್ತ ನಡೆಯುವ ಪರಿ, ಬಟ್ಟಲು ಕಂಗಳು, ಜಾಸ್ತಿ ಆಲಿಸಿರದಿದ್ದರೂ ‘ನೀರೊಳಗೆ ವೀಣೆ ನುಡಿದಂತ’ ಧ್ವನಿ, ಮತ್ತು ಮೊನ್ನೆ ಮೊನ್ನೆ ತಾನೇ ಕೆಯಲ್ಲಿ ಹಿಡಿದುಕೊಂಡು ಹೋಗುತಿದ್ದಳಲ್ಲ, ಮಿಲ್ಸ್ ಅಂಡ್ ಬೂನ್ಸ್‌ನ ಯಾವುದೋ ಕಚಡಾ ಕಾದಂಬರಿ... ಎಲ್ಲವೂ ಅವನ ಮನ ಸೂರೆಗೊಂಡವು.

**‘ಗಿರಿ ಕಮರಿಯಾಳದಲಿ ತೆವಳಿದ್ದ ಭಾವಗಳ ಮುಗಿಲ ಮಂಚದೊಳಿಟ್ಟು ತೂಗುತಿಹುದು’**

ಟೆರೇಸ್ ಮೇಲೆ ಇವನೂ ಸ್ನೇಹಿತರೂ ಆಡುತಿದ್ದ ಶಟಲ್ ಕಾಕ್ ಏನಾದರೂ ಬೀದಿಹಾರಿ ಎದುರುಮನೆಯ ಟೆರೇಸಿಗೆ ಬಿದ್ದರೆ ಇವನ ಸ್ನೇಹಿತರೆಲ್ಲರೂ ಇವನ ತಲೆ ತಿನ್ನುತ್ತಾರೆ, ಇವನು ಅಲುಗದೇ ಇದ್ದರೆ, ‘ನಿನ್ನದು ಇಷ್ಟೇ ಬಿಡು’ ಎಂದು ಬೈದುಕೊಳ್ಳುತ್ತ ತಾವೇ ಇಸಿದುಕೊಂಡು ಬರುತ್ತಾರೆ!

******

ಅಂದೊಮ್ಮೆ ಮಳೆಬಾರದ ಮಳೆಗಾಲದ ಅಪರೂಪದ ಸಂಜೆಯಲಿ ಸ್ನೇಹಿತರ್ಯಾರೂ ಇಲ್ಲದಿದ್ದಾಗ ಅವನು ತನ್ನ ಮೆಚ್ಚಿನ ಮಗ್ ತುಂಬ ಕಾಫಿ ಕದರಿಕೊಂಡು, ಸಿಗರೇಟು, ಲೈಟರು, ಗಿಟಾರಿನೊಂದಿಗೆ ಟೆರೇಸು ಹತ್ತಿ ಮೇಲೆ ಕುಳಿತಿದ್ದ. ಆಕಾಶವೆಲ್ಲ ಮೋಡ ಮುಸುಕಿ ಕಪ್ಪಾಗಿತ್ತು, ಮಳೆ ಈಗಲೋ ಆಗಲೋ ಎನ್ನುವಂತಿತ್ತು. ಕೂರ್ಗಾಳಿ ಬೀಸುತಿತ್ತು. ಗುಟುಕು ಕಾಫಿಕುಡಿದು ಸಿಗರೇಟು ಹಚ್ಚಿಕೊಂಡು ಹಾಗೇ ಗಿಟಾರ್‌ನ ಶ್ರುತಿಮಾಡಿ ಮೀಟಿದ. ‘wrapped in a polythene and tucked away safe in my heart… but it rained…’ ಎದುರು ಮನೆಯ ಟೆರೇಸಿನ ಮೇಲೆ ಬಟ್ಟೆ ತೆಗೆಯಲು ಬಂದವಳು ಕೈಯ ಬಟ್ಟೆ ಸಮೇತ ಹಾಗೇ ನಿಂತುಬಿಟ್ಟಳು! ಹಾಡುತ್ತ ತಟ್ಟನೇ ಅತ್ತನೋಡಿದವನ ಗಿಟಾರ್ ಮೀಟುತಿದ್ದ ಬಲಗೈಯಿಂದ ಉರಿಯುತಿದ್ದ ಸಿಗರೇಟು ಹಾರಿಬಿತ್ತು, ಹಾಡೂ ತಪ್ಪಾಯಿತು.‘all the sand castles’ve drowned…’ ತಲೆಗೂದಲನೆಲ್ಲ ತೂರುತಿದ್ದ ಆ ಮಳೆಗಾಳಿಯಲ್ಲಿ ಅವಳು ಹಾಗೇ ನಿಂತುಬಿಟ್ಟಿದ್ದಳು, ಬಟ್ಟಲು ಕಂಗಳಾಳದಲ್ಲಿ ನಿಲುಕಲಾರದ ಭಾವಗಳು, ತುಟಿಯಂಚಿನಲ್ಲಿ ಕಂಡು ಕಾಣದಂತ ಸಣ್ಣನಗು, ಕೈಲಿದ್ದ ಬಟ್ಟೆಗಳು ಕೂಡ ಅವಳ ಗಮನ ತಪ್ಪಿಸಿ ಹಾರುವ ಪ್ರಯತ್ನ ಮಾಡುತಿದ್ದವು... ಯಾಕೋ ಗೊತ್ತಿಲ್ಲ ಅವನ ಕಣ್ಣನಲ್ಲಿ ನೀರಾಡಿದವು, ಮೈಯೆಲ್ಲ ಕಂಪಿಸಿತು, ತಟತಟನೇ ಮಳೆಹನಿಗಳು ಶುರುವಾದವು...

**‘ಸತ್ತ ಬಾಳಿಗೆ ಮತ್ತೆ ಅಮೃತವೆರೆದು ಕತ್ತಲಾಳಗಳಲ್ಲಿ ದೀಪವುರಿದು’**

ರಾತ್ರಿ ಹಾಸಿಗೆಮೇಲುರುಳಿದವನಿಗೆ ನಿದ್ದೆ ಹತ್ತದು. ಅಮ್ಮ ಎರಡು ವರ್ಷದಿಂದ ಹೇಳುತಿದ್ದಾಳೆ, ‘ಒಬ್ಬನೇ ಮಗ, ಮದುವೆಯಾಗಿಬಿಡು, ನಾನೂ ನನ್ನ ಸೊಸೆಯೊಂದಿಗೆ ನಿನ್ನಲ್ಲಿಗೇ ಬಂದು ಬಿಡುತ್ತೇನೆ’ ಆದರೆ ಇವನಿಗೆ ಭಯ, ತನ್ನ ಕೆಲಸ, ಸಂಗೀತ, ಸ್ನೇಹಿತರು, ಸಿನೆಮಾ ಇವುಗಳ ನಡುವೆ ಯಾವ ಹುಡುಗಿಯನ್ನು ನೋಡಿದರೂ ಇವನಿಗೆ ತಾನು ಅವಳಿಗೆ ತಕ್ಕವನಲ್ಲ ಅನಿಸಿಬಿಡುತಿತ್ತು. ಆದರೆ ಇಂದು ರಾತ್ರಿ ತನ್ನ ಹೃದಯದಾಳದಲ್ಲಿ ಪ್ರತಿಷ್ಟಾಪನೆ ಮಾಡಿಕೊಂಡಿದ್ದ ಮುಖವಿರದ ಪ್ರೇಮಮೂರ್ತಿಗೆ ಪೂರ್ಣಜೀವ ಬಂದು ಬಿಟ್ಟಿದೆ, ಅದಕ್ಕೊಂದು ಹೆಸರೂ ಸಿಕ್ಕಿದೆ– ‘ನೀಹಾರಿಕಾ...’

******

ಅದೊಂದು ದಿನ ಬೆಳಿಗ್ಗೆ ಇವಳು ಆಫೀಸಿನ ಗ್ರೌಂಡ್ ಫ್ಲೋರಿಗೆ ಬಂದು ಲಿಫ್ಟಿನ ಗುಂಡಿಯದುಮಿದಳು, ಲಿಫ್ಟ್ ಬಾಗಿಲು ತೆರೆದು ಒಳಹೊಕ್ಕವಳ ಹೃದಯ ನಿಂತಂತಾಯಿತು... ಅವನು ಅಲ್ಲಿದ್ದ! ಬೇಸ್‌ಮೆಂಟಿನಲ್ಲಿ ತನ್ನ ಕಾಡುಕುದುರೆಯಂತಹ ಬೈಕು ನಿಲ್ಲಿಸಿ ಮೇಲಕ್ಕೆ ಬರುತಿದ್ದ ಅನಿಸುತ್ತೆ, ಮೂಗಿನ ಮೇಲೆ ನಿಂತಿದ್ದ ಬೆವರ ಹನಿಗಳು, ಕೈಯಲ್ಲಿನ ಬ್ಯಾಗು, ಹೆಲ್ಮೆಟ್, ಹಾಲುಬಿಳೀ ಬಣ್ಣದ ಟೀಶರ್ಟ್, ಮೇಲೊಂದು ಜರ್ಕಿನ್ ನೀಲಿ ಜೀನ್ಸು.. ಅವಳು ತನ್ನ ಫ್ಲೋರಿನ ಗುಂಡಿಯನ್ನದುಮಿ ನೋಡಿದಳು, ಅವನು ತನ್ನ ಆಫೀಸಿನ ಮೇಲಿನ ಫ್ಲೋರಿನಲ್ಲಿ ಕೆಲಸ ಮಾಡುತ್ತಾನೆ ಎಂದು ಗೊತ್ತಾಯಿತು ಹಾಗೂ ಅವನ ಮುಂದೆ ಲಿಫ್ಟಿನ ಬಾಗಿಲಿಗೆದುರಾಗಿ ನಿಂತವಳಿಗೆ ಅವನು ಉಸಿರಾಡಲೂ ಹೆದರಿ ನಿಂತಿರುವುದು ಗೊತ್ತಾಯಿತು.

ಇವಳು ಕೆಲಸ ಮಾಡುತಿದ್ದ ಫ್ಲೋರಿನಲ್ಲಿ ಲಿಫ್ಟ್ ನಿಂತು ಇವಳು ಹೊರಹೆಜ್ಜೆಯಿಟ್ಟಾಗ ಅವನು ಉಸಿರು ಸಿಕ್ಕಿಕೊಂಡಿದ್ದ ಎದೆಯನ್ನು ಸರಾಗಗೊಳಿಸಲು ಏದುಸಿರು ಬಿಟ್ಟ, ಧೀರ್ಘವಾಗಿ ಉಸಿರಾಡಿದ, ಅವಳಿಗೆ ಗೊತ್ತಾಯಿತೇನೋ ಎಂಬಂತೆ ಅವಳು ತಿರುಗಿನೋಡಿದಳು, ಇವನ ಪರಿಸ್ಥಿತಿ ಇನ್ನೂ ಬಿಗಡಾಯಿಸಿತು, ತಲೆಗೂದಲಲ್ಲಿ ನಿಂತಿದ್ದ ಬೆವರ ಹನಿಗಳು ಹಣೆಯ ಮೇಲೆ ಕಾಣಿಸಿಕೊಂಡವು, ಮುಗುಳ್ನಗುವ ಪ್ರಯತ್ನ ಮಾಡಿದ, ಅವಳು ನಗಲಿಲ್ಲ! ಲಿಫ್ಟ್‌ನ ಬಾಗಿಲು ಹಾಕಿಕೊಂಡಾಗ ತನ್ನನ್ನು ತಾನೇ ಜೋರಾಗಿ ಶಪಿಸಿಕೊಂಡ.

**‘ಬಾಳು ಕೊನೆಯೇರುತಿದೆ ಬೆಳಕಿನುತ್ಸವದಲ್ಲಿ, ಮೈಯ ಕಣಕಣದಲ್ಲೂ ಹಿಗ್ಗು ಮುರಿದು’**

ಇವಳಪ್ಪ ಅಮ್ಮನದು ಆಗಿನ ಕಾಲಕ್ಕೇ ಪ್ರೇಮವಿವಾಹ. ಕುಟುಂಬಗಳ ವಿರೋಧದ ನಡುವೆ ಹೊರಬಂದು ಮದುವೆಯಾಗಿ ಬದುಕ ಕಟ್ಟಿಕೊಂಡವರು ಅವರು. ಅಪ್ಪ ಆಗೀಗ ಹೇಳುತ್ತಿರುತ್ತಾರೆ, ನೀನೇ ನಿನ್ನ ಹುಡುಗನ್ನ ನೋಡಿಕೊಂಡುಬಿಡು, ‘ you choose your boy!’ ಅಮ್ಮ ನಕ್ಕು ಛೇಡಿಸುತ್ತಿರುತ್ತಾಳೆ, ‘ನನ್ನ ಮಗಳು ನನ್ನಷ್ಟು ಧೈರ್ಯವಂತಳಲ್ಲ!’ ಮೊನ್ನೆ ಮತ್ತೆ ಅವನು ಲಿಫ್ಟ್‌ನಲ್ಲಿ ಎದುರು ಸಿಕ್ಕ. ಇವಳು ಕಿರುನಗುವ ಪ್ರಯತ್ನ ಮಾಡಿದಳು, ಅವನ ಕೈಯಲ್ಲಿದ್ದ ಬ್ಯಾಗು ಬಿದ್ದುಬಿಟ್ಟಿತು, ಅವನು ‘ಓ, ಹಾಯ್’ ಎಂದವನೇ ‘ಸಾರಿ’ ಎಂದು ಬ್ಯಾಗನೆತ್ತಿಕೊಂಡ. ಒಂದು ಪುಸ್ತಕ ಹಾಗೇ ಬಿದ್ದಿತ್ತು. ಇವಳು ತಲೆಬಗ್ಗಿಸಿಕೊಂಡೇ ಅದನ್ನು ನೋಡಿದಳು, ‘ಜೀನ್ ಪೌಲ್ ಸಾರ್ತ್ರೆ’, ಕೆಳಗಡೆ ಸಣ್ಣದೊಂದು ಕೈಬರಹದ ಹೆಸರು – ಸುಮನ್! ಹಿಂದಿನಂತೆ ಇವಳು ಲಿಫ್ಟ್‌ನಿಂದ ಹೊರಹೋಗುವಾಗ ಹಿಂತಿರುಗಿ ನೊಡಿದಳು, ಅವನು ಪುಸ್ತಕವನೆತ್ತಿಕೊಳ್ಳಲು ಕುಳಿತವನು ಇವಳೆಡೆಗೆ ನೋಡಿ ನಕ್ಕ, ಇವಳು ಮೆಲ್ಲನೇ ಪ್ರತಿನಕ್ಕಳು. ಲಿಫ್ಟ್ ಹಾಕಿಕೊಂಡಾದ ಮೇಲೆ ಖುಷಿಯ ಉದ್ಗಾರ ಕೇಳಿಸಿತಾ? ‘ಓ ಗಾಡ್.. ಥ್ಯಾಂಕ್ಯೂ ವೆರಿಮಚ್’

**‘ಹೇಗೆ ತಾಳಲಿ ಹೇಳೆ ಈ ಮಧುರ ಅನುಭವವ, ಕಲ್ಪವೃಕ್ಷದ ಹಣ್ಣು ತಿಳಿದ ರುಚಿಯ’**

******

ಅವಳ ಮನೆಯ ಮುಂದೆ ಚಪ್ಪಲಿಗಳ ಜಾತ್ರೆ, ಬೀದಿಯುದ್ದಕ್ಕೂ ಕಾರು, ಬೈಕುಗಳ ಸಾಲು, ಮನೆಯ ಬಾಗಿಲಿಗೆ ಹಸಿರು ತೋರಣ, ಒಳಗಡೆ ಸಂಭ್ರಮ, ಗಲಗಲ ಮಾತುಕತೆ, ನಗು, ಎದುರು ಮನೆ ಬಾಲ್ಕನಿಯಲ್ಲಿ ನಿಂತವನಿಗೆ ಕಣ್ಣು ಮಂಜು ಮಂಜು, ಎದೆಯ ಬಗೆದು ಹೃದಯ ಕಿತ್ತು ತಿನ್ನುವಂತ ನೋವು, ಮೆಲ್ಲನೆ ಟೆರೇಸಿಗೆ ಹತ್ತಿಹೋಗಿ ಸಿಗರೇಟು ಹಚ್ಚಿದವನಿಗೆ ತನ್ನ ಮೇಲೇ ಸಿಟ್ಟು ಬಂತು, ಏನೆಲ್ಲ ಮಾಡಿದರೂ ಅವಳಿಗೆ ಹೇಳಲಾಗಲಿಲ್ಲವಲ್ಲ, ಧೈರ್ಯಗೇಡಿಯಾದೆನಲ್ಲ, ಇಲ್ಲದ ತಿರಸ್ಕಾರಕ್ಕೇ ಹೆದರಿದೆನಲ್ಲ. ತಾನು ಕೇಳಿ ಅವಳು ಆಗದು ಎಂದಿದ್ದರೆ ಮನಸ್ಸು ಕಲ್ಲಾದರೂ ಆಗುತಿತ್ತೇನೋ ಆದರೆ ಇಂದು ಉರಿಯುತ್ತಿದೆ, ಸಿಗರೇಟಿನ ಹಾಗೇ ಹೊತ್ತಿ ಹೊಗೆಯಾಡುತ್ತಿದೆ, ಗಿಟಾರಿನ ತಂತಿಕೂಡ ಬೆರಳ ಕೊಯ್ಯುತಿದೆ...

**‘ಹೇಗೆ ತಾಳಲಿ ಹೇಳೆ ಇಂತ ಭಾವವೇ ನಾಳೆ ಉಳಿಯದೆಯೇ ಸರೀದೀತು ಎಂಬ ವ್ಯಥೆಯ’**

ಫೋನು ಬಿಮ್ಮಗೆ ಮಲಗಿದೆ, ಟಿಪಾಯಿಮೇಲೆ ಒಂದು ಲಕೋಟೆ, ಲಕೋಟೆಯಿಂದ ಅರ್ಧಮರ್ಧ ಹೊರಚೆಲ್ಲಿರುವ ಇವಳ ಫೋಟೊ, ಜಾತಕ, ಇತರ ವಿವರಗಳುಳ್ಳ ಕೆಲವು ಹಾಳೆಗಳು, ಲಕೋಟೆಯ ಮೇಲೆ ಇವರ ವಿಳಾಸ ಗೀಚಿರುವ ಪರಿಯ ನೋಡಿದರೇ ತಿಳಿಯುತ್ತದೆ, ಇದು ತಿರಸ್ಕೃತಗೊಂಡ ಸಂಬಂಧ. ಅಮ್ಮನ ಇಲ್ಲದ ತಲೆನೋವಿನ ಕಾರಣಕ್ಕೆ ಟಿವಿಯ ಬಾಯಿ ಬಂದು ಮಾಡಿ, ಶಬ್ದವಿಲ್ಲದ ಚಿತ್ರಗಳನ್ನು ಇವಳು ನೋಡುತಿದ್ದಾಳೆ, ಇವಳಿಗೇನೂ ದುಃಖವಾಗಿಲ್ಲ, ನಿರಾಳವಾಗಿದ್ದಾಳೆ, ಇನ್ನೂ ಸಮಯ ಸಂದರ್ಭಗಳ ಸೃಷ್ಟಿಸಿಕೊಳ್ಳುವುದರ ಬಗ್ಗೆ, ಅವನ್ನನ್ನು ಮಾತನಾಡಿಸುವ ಬಗ್ಗೆ ಯೋಚಿಸುತಿದ್ದಾಳೆ, ಬಾಗಿಲಿಗೆದುರಾಗಿ ಈಸಿಚೇರಿನಲ್ಲಿ ಮುದ್ದಿನ ಅಪ್ಪ ಒರಗಿಕೊಂಡಿದ್ದಾರೆ, ಅವರು ಧೃತಿಗೆಟ್ಟಿಲ್ಲವಾದರೂ ಮೊದಲನೇ ಪ್ರಯತ್ನವೇ ಹೀಗಾಯಿತಲ್ಲ ಎಂದು ಚಿಂತಿತರಾಗಿದ್ದಾರೆ, ಮೌನವೆಂಬುದು ಮನೆಯೊಳಗೆ, ಹೊರಗೆ ಇಳಿಯುತ್ತಿರುವ ಸಂಜೆಗತ್ತಲಿನಷ್ಟೇ ದಟ್ಟವಾಗಿ ಕವಿದುಕೊಳ್ಳುತಿದೆ,

ಹೀಗಿರುವಾಗ...

ಬಾಗಿಲಿನಲ್ಲಿ ಯಾರದೋ ನೆರಳು, ತಲೆಯೆತ್ತಿ ನೋಡಿದವಳ ಹೃದಯ ಬಾಯಿಗೆ ಬಂತು. ಅವನು ಅದೇ ಮುದ್ದಿನ ಹಾಲು ಬಣ್ಣದ ಟೀ ಶರ್ಟು, ನೀಲಿ ಜೀನ್ಸಿನೊಂದಿಗೆ ಬಾಗಿಲಲ್ಲಿ ನಿಂತಿದ್ದಾನೆ, ಬಹಳ ಸಭ್ಯಸ್ತನಂತೆ ಹೊಸ್ತಿಲಾಚೆ ಚಪ್ಪಲಿಬಿಡುತಿದ್ದಾನೆ, ಸಂಜೆಯ ರಂಗೆಲ್ಲ ಇವಳ ಕೆನ್ನೆಗೇ ಏರಿದಂತಾಗಿ ಇವಳು ತುಟಿಯರಳಿಸಿದಳು, ಅಪ್ಪ ಈಸಿಚೇರಿನಲ್ಲಿ ನೆಟ್ಟಗೆ ಕೂತರು. ಅವನು ಸ್ವಲ್ಪ ಅಧೀರನಾಗಿದ್ದ, ಆದರೆ ಮುಖದಲ್ಲಿ ಧೃಢ ನಿರ್ಧಾರ, ಅದೇ ಬಿಗಿದುಕೊಂಡ ತುಟಿಗಳು, ಸ್ವಲ್ಪವೇ ಕೆದರಿದ್ದ ತಲೆಗೂದಲು, ಕಣ್ಣು ಕೆಂಪಗೇ ಇದ್ದವೋ? ಗೊತ್ತಾಗಲಿಲ್ಲ. ಅವನೇ ಮನೆಯಲ್ಲಿ ಬಿಗಿದುಕೊಂಡ ಮೌನವೊಡೆದ, ‘ಅಂಕಲ್?.. ಮತ್ತು ಮಾತು ಶುರುಮಾಡಿದ...!

**‘ಯಾವುದೀ ಹೊಸ ಸಂಚು ಎದೆಯಂಚಿನಲಿ ಮಿಂಚಿ, ಮನಸು ಕನಸುಗಳನ್ನು ಕಲೆಸಿರುವುದು,**
**ಗಿರಿಕಮರಿಯಾಳದಲಿ ತೆವಳಿದ್ದ ಭಾವಗಳ ಮುಗಿಲ ಮಂಚದೊಳಿಟ್ಟು ತೂಗುತಿಹುದು’**